(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಮಗೆ ಬೇಕಾಗಿರುವುದು, ನಾವು ಏನು ಅಡ್ಜಸ್ಟ್‌ಮೆಂಟ್ ಆಗಿದ್ದೇವೆ ? ಅವರು ಏನು ಅಡ್ಜಸ್ಟ್‌ಮೆಂಟ್ ಆಗಿಲ್ಲ ? ಎರಡರಲ್ಲಿ ಒಂದು ಹೇಳಬೇಕು. ಇಲ್ಲವೆಂದರೆ ಆ ಪದವನ್ನು ವಾಪಸ್ ಪಡೆಯಬೇಕು.

ಉಪಾಧ್ಯಕ್ಷರು: ಅವರು ಇಲ್ಲ ಎಂದು ಹೇಳಿದ್ದಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಇಲ್ಲ ಎಂದರೆ, ಆ ಪದವನ್ನು ವಾಪಸ್ ಪಡೆಯಬೇಕು.

ಉಪಾಧ್ಯಕ್ಷರು: ಅದು ಇಲ್ಲವೆಂದು ಕ್ಲಾರಿಫೈ ಮಾಡಿದ್ದಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಎಲ್ಲಿ ಕ್ಲಾರಿಫೈ ಮಾಡಿದ್ದಾರೆ ? ಮಾನ್ಯ ಉಪಾಧ್ಯಕ್ಷರೆ, ನಾವೂ ಕೂಡ ಒಂದು ರಾಜಕೀಯ ಪಕ್ಷವನ್ನು ಪ್ರತಿನಿಧಿಸತಕ್ಕಂಥವರು, ನಮಗೂ ಪ್ರಾಮಾಣಿಕತೆ ಇದೆ. ಅವರು ತಮ್ಮ ಅಭಿಪ್ರಾಯಗಳನ್ನು ಬೇಕಾದಷ್ಟು ಹೇಳಿಕೊಳ್ಳಲಿ, ಆದಕ್ಕೆ ನಮ್ಮ ಅಭ್ಯಂತರವಿಲ್ಲ. ಅವರು ನಿನ್ನೆಯಿಂದ ಮಾತನಾಡಿದರು, ಆಗ ನಾವು ಒಂದು ಸ್ವಲ್ಪವೂ ತೊಂದರೆ ಮಾಡಿಲ್ಲ. ಅವರು ಬೇರೆ ರಾಜಕೀಯ ಪಕ್ಷಗಳ ಬಗ್ಗೆ ಹಗುರವಾಗಿ ಮಾತನಾಡುವುದನ್ನು ನಾನು ಒಪ್ಪುವುದಿಲ್ಲ.

ಉಪಾಧ್ಯಕ್ಷರು : ಆ ರೀತಿ ಮಾತನಾಡಿಲ್ಲವೆಂದು ಅವರು ಹೇಳಿದ್ದಾರೆ, ತಾವು ಕುಳಿತು ಕೊಳ್ಳಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಅವರು ಹೇಳಿದ್ದಾರೋ ಇಲ್ಲವೋ ಎಂದು ಕಡತವನ್ನು ತರಿಸಿ ನೋಡಿ.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಅವರು ಆ ಪದವನ್ನು ವಾಪಸ್ ತೆಗೆದುಕೊಳ್ಳದಿದ್ದರೆ, ನಾನು ಧರಣಿಯನ್ನು ಮಾಡುತ್ತೇನೆ.

(ಮಾನ್ಯ ಸದಸ್ಯರು ಬಾವಿ ಒಳಗೆ ಬಂದು ಧರಣಿನಿಂತರು)

ಉಪಾಧ್ಯಕ್ಷರು : ಆ ರೀತಿ ತಮ್ಮನ್ನು ಕುರಿತು ಮಾತನಾಡಿಲ್ಲವೆಂದು ವಿರೋಧ ಪಕ್ಷದ ನಾಯಕರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ.